

# ಪೊಟ್ಯಾಟೊ ಚಿಪ್ ರಾಕ್!

ಕ್ಯಾಲಿಫೋರ್ನಿಯಾದ ಸ್ಯಾನ್ ಡಿಯಾಗೋದ ಬಳಿಯ ವುಡನ್ ಪರ್ವತದ ತುದಿಯಲ್ಲೊಂದು ಕಲ್ಲು ಬಂಡೆಯಿದೆ. ಇದನ್ನು ವೀಕ್ಷಿಸಲು ಸಾವಿರಾರು ಪ್ರವಾಸಿಗರು ನಿತ್ಯ ಪರ್ವತವನ್ನೇರುತ್ತಾರೆ. ಇದರಲ್ಲಿ ಅಂಥದೇನಿದೆ ಎನ್ನುವಿರಾ? ಈ ಕಲ್ಲು ಬಂಡೆಯ ಬದಿಯು ಪೊಟ್ಯಾಟೊ ಚಿಪ್‌ನಂತೆ ಕಾಣಿಸುತ್ತದೆ. ಕಾರಣ ಪೊಟ್ಯಾಟೊ ಚಿಪ್ ರಾಕ್ ಎಂದು ಕರೆಯುವರು. ಇದು ಪರ್ವತದ ತುದಿಯಿಂದ 92 ಮೀ.ಕೆಳಗಿದೆ. ಬಹಳಷ್ಟು ಪ್ರವಾಸಿಗರು ಕಠಿಣವಾದ 6.6 ಮೈಲು ಹಾದಿಯಲ್ಲೇ ಸುತ್ತು ಬಳಸಿ ಇಲ್ಲಿಗೆ ಕ್ರಮಿಸುತ್ತಾರೆ. ಇಲ್ಲಿಗೆ ತಲುಪಲು 3 ರಿಂದ 4 ತಾಸಿನ ಪ್ರಯಾಣ ಮಾಡಬೇಕು. ಇದು ಪಾವೆರಾಮೋನ ಹೆದ್ದಾರಿಯ ಬಳಿ ಇದೆ.

ಪ್ರವೇಶ ದ್ವಾರದಲ್ಲಿ ವಾಹನಗಳನ್ನು ನಿಲ್ಲಿಸಲು ಸ್ಥಳವಿದೆ. ಬೇಸಿಗೆಯಲ್ಲಂತೂ ಪರ್ವತವನ್ನು ಬೆಳಗಿನ ಜಾವ ಏರಬೇಕಾಗುತ್ತದೆ. ಏಕೆಂದರೆ ಪಾವೆಯ ಮರಳುಗಾಡಿನ ಹವಾಮಾನದ ಪ್ರಯಾಣ ಕಷ್ಟಕರವಾದುದು.

ಪೊಟ್ಯಾಟೊ ಚಿಪ್ ರಾಕ್ ಯಾವಾಗಲೂ ಪ್ರವಾಸಿಗರಿಂದ ತುಂಬಿ ತುಳುಕುತ್ತದೆ. ಈ ರಾಕ್ ನ ಮೇಲೆ ನೀವು ಜಿಗಿಯಬಹುದು, ಕುಳಿತುಕೊಳ್ಳಬಹುದು, ನಿಲ್ಲಬಹುದು. ಅಲ್ಲಿಂದ ಕಾಣುವ ನಿಸರ್ಗ ಸಿರಿ ಅನನ್ಯವಾದುದು; ಅದ್ಭುತವಾದುದು! ವೀಕ್ ಎಂಡ್ ಮೋಜಿಗೆ ಹೇಳಿ ಮಾಡಿಸಿದಂತಿದೆ. ಪರ್ವತವನ್ನೇರುವ ಆರಂಭದಲ್ಲಿರುವ ಫಲಕಗಳಲ್ಲಿನ ಸೂಚನೆಗಳನ್ನು ಪಾಲಿಸಬೇಕಾಗುತ್ತದೆ. ಇಲ್ಲಿ ಹಾವುಗಳಿರುವುದರಿಂದ ತುಂಬ ಹುಷಾರಾಗಿರಬೇಕೆಂಬುದು ನೆನಪಿನಲ್ಲಿರಲಿ.

★ ಪ್ರಕಾಶ ಎಸ್.ಮನ್ನಂಗಿ



